ಪ್ರತಿಭಾವಂತ. ಮೂರು ದಿನದ ಫೋಟೊಗ್ರಫಿ ಟ್ರಿಪ್ಪಿನಲ್ಲಿ ಅಮೂಲ್ ಕಾಳೆ ಪ್ರಾಣಿ– ಪಕ್ಷಿಗಳನ್ನು ಪ್ರೀತಿಯಿಂದ ತೋರಿಸಿದ್ದ. ನಮ್ಮ ಜೊತೆ ಹೆಚ್ಚು ಸ್ನೇಹದಿಂದ ಇರುತ್ತಿದ್ದ. ಕೊಂಚವೂ ಬೇಸರಿಸದೆ ಪಟ ತೆಗೆಯಲು ಅನುಕೂಲ ಕಲ್ಪಿಸುತ್ತಿದ್ದ. ಅವನಣ್ಣನ ಅಂಧಾ ದರ್ಬಾರ್ ನಡೆಯುತ್ತಿದ್ದ ಕಾರಣ ಸುಮ್ಮನಿರುತ್ತಿದ್ದ. ಅಮೂಲ್‌ಗೆ ಖುಷಿಯಿಂದ ಟಿಪ್ಸ್ ಕೊಡಲು ಹೋದಾಗ ನಯವಾಗಿ ತಿರಸ್ಕರಿಸಿದ. ನಿಮ್ಮ ಸ್ನೇಹವಿರಲಿ ಸರ್ ಎಂದಿದ್ದ. ಅಬ್ಬಬ್ಬ! ಅಣ್ಣ ತಮ್ಮಂದಿರ ನಡುವಿನ ಗುಣ ಸ್ವಭಾವದಲ್ಲಿ ಎಷ್ಟೊಂದು ಅಜಗಜಾಂತರ ವ್ಯತ್ಯಾಸ.

ನಾವು ಹೋಗಿದ್ದ ಬಿಗ್ವಾನ್ ಎಂಬ ಊರು ಮಹಾರಾಷ್ಟ್ರದಲ್ಲಿತ್ತು. ಅಹ್ಮದ್‌ನಗರ, ಪುಣೆ ಮತ್ತು ಸೋಲಾಪುರ ಜಿಲ್ಲೆಗಳ ಗಡಿಯಲ್ಲಿರುವ ಈ ಸಣ್ಣ ಪಟ್ಟಣದ ಸಮೀಪ ಕುಂಬಾರವಾಡ ಎಂಬ ಹಳ್ಳಿಯಿದೆ. ಇದರ ಬಳಿ ಇರುವ ಉಜ್ಜನಿ ಅಣೆಕಟ್ಟಿನ ಹಿನ್ನೀರೇ ಪಕ್ಷಿ ವೀಕ್ಷಣೆಯ ತಾಣ. ಅಗಾಧವಾಗಿ ಹರಡಿರುವ ಇಲ್ಲಿನ ಜಲ ಮೇಲಣ ಪಯಣದಲ್ಲಿ ಅಚ್ಚರಿಯ ಹಕ್ಕಿಗಳ ಹಾರಾಟವನ್ನು ಕಾಣಬಹುದು. ದೇಶದ ಮೂಲೆಮೂಲೆಗಳಿಂದ ಹಕ್ಕಿಗಳು ಅನ್ನವನ್ನರಸಿ ಇಲ್ಲಿಗೆ



ಓಡೋಡಿ ಬರುತ್ತವೆ. ವಿಶೇಷವಾಗಿ ಫ್ಲೆಮಿಂಗೊ ಹಕ್ಕಿಗಳ ಛಾಯಾಗ್ರಹಣಕ್ಕೆ ಇದು ಹೇಳಿಮಾಡಿಸಿದ ಜಾಗ. ವಿದೇಶದ ಹಕ್ಕಿಗಳೂ ಕೂಡ ಹಸಿದು ವಲಸೆ ಬರುತ್ತವೆ. ಹೇರಳವಾಗಿ ಇಲ್ಲಿ ಸಿಗುವ ಮೀನು, ಪಾಚಿ, ಹುಲ್ಲು, ಮತ್ತು ಇತರೆ ಜಲ ಮೂಲಗಳೇ ಈ ಆಕರ್ಷಣೆಗೆ ಕಾರಣ. ಅನೇಕ ಹಕ್ಕಿಗಳು ಮೊಟ್ಟೆ ಇಟ್ಟು ಮರಿ ಮಾಡಿಕೊಳ್ಳಲು ಬಂದರೆ; ಕೆಲವು ಫುಲ್ ಮೀಲ್ಸ್ ಸವಿಯಲಷ್ಟೇ ಬರುತ್ತವೆ.

ಕೃಷಿಯ ಜೊತೆಗೆ ಇಲ್ಲಿನ ಜನ ಮೀನುಗಾರಿಕೆ ಹಾಗೂ ಎಮ್ಮೆ ಸಾಕಾಣಿಕೆ ಕೂಡ ಮಾಡುತ್ತಾರೆ. ನಮ್ಮಂಥ ಪಟಗಾರರನ್ನು ಹಿಡಿದು ಉಳಿಸಿಕೊಂಡು, ಸುತ್ತಾಡಿಸಿ ಹಣ ಗಳಿಸುವ ಜನರಿಗೆ ಇಲ್ಲಿ ಬರವಿಲ್ಲ. ಮಹಾರಾಷ್ಟ್ರದ 'ಮಚ್ಚಿ ಥಾಲಿ' ಎಂಬ ಮೀನೂಟಕ್ಕೂ ಈ ಊರು ಹೆಸರುವಾಸಿ. ಬಿಗ್ವಾನ್ ಸುತ್ತಮುತ್ತ ಕುರುಚಲು ಕಾಡು ಮತ್ತು ಹುಲ್ಲುಗಾವಲಿನ ಬೆಟ್ಟಗುಡ್ಡಗಳಿವೆ. ಇಲ್ಲಿ ಹಲವು ಬಗೆಯ ಹದ್ದುಗಳು, ಗೂಬೆಗಳು, ನರಿ, ತೋಳ ಮತ್ತು ಹೈನಾಗಳು ವಾಸಿಸುತ್ತವೆ. ಪಕ್ಷಿಗಳ ಪಟಗಳು ಮುಗಿಸಿದ ಮೇಲೆ ಇವುಗಳ ಹುಡುಕಾಟಕ್ಕೆ ಜೀಪು ಮಾಡಿಕೊಂಡು ಹೋಗಬೇಕು. ಈ ಪಯಣದ ದಾರಿಯಲ್ಲೇ ರಾಹುಲ್ ಕಾಳೆ ಎಂಬ ಸುಲಿಗೆಕೋರ ನಮ್ಮನ್ನು ದೋಚಿದ್ದು. ಇವನ ಈ ಒಂದು ಕಿರಿಕಿರಿಯ ಕಥೆ ಬಿಟ್ಟರೆ ಉಳಿದಂತೆ ನಾವಿಲ್ಲಿ ಗಳಿಸಿದ ಪಟಗಳು, ಪಡೆದ ಅನುಭವ, ಪಟ್ಟ ಆನಂದ ಲೆಕ್ಕವಿಲ್ಲದಷ್ಟು.

ಎರಡನೆಯ ದಿನ ಬೆಳಗ್ಗೆ ಹೊತ್ತಿನಲ್ಲಿ ನಾಲ್ಕು ಸುಂದರ ಕೊಕ್ಕರೆಗಳನ್ನು ತೋರಿಸಿದ ನಮ್ಮ ಹಕ್ಕಿ ತೋರುಗನೊಬ್ಬ 'ಇವು ಬೆಳ್ಳಕ್ಕಿ ಜಾತಿಯಲ್ಲೇ ಅತಿ ಎತ್ತರದ ಪಕ್ಷಿಗಳು. ನಾಲ್ಕು ಅಡಿ ಎತ್ತರದ ಈ ಬರ್ಡ್ ಹಾರಿದರೆ ಇದರ ರೆಕ್ಕೆ ಏಳು ಅಡಿ ಅಗಲ ಹರಡಿಕೊಳ್ಳುತ್ತವೆ' ಎಂದು ಶಂಖ ಊದಿದ. 'ಅಪರೂಪದ ಪಕ್ಷಿಗಳು ಸರ್, ನಿಮ್ಮ ಅದೃಷ್ಟ ಚೆನ್ನಾಗಿದೆ ಬಾರಿಸಿಕೊಳ್ಳಿ' ಎಂದ. ಹೆಚ್ಚು ಇನಾಮು ಗಳಿಸುವ ದುರಾಸೆಯಿಂದ ಹೀಗೆ ವದರುತ್ತಿದ್ದಾನೆ ಎಂದು ನಾನು ಭಾವಿಸಿಕೊಂಡೆ. ಅನೇಕ ಪಕ್ಷಿ ತೋರುಗರು ಜಾಸ್ತಿ ಭಕ್ಷೀಸು ಪಡೆಯಲು ಹೀಗೆ ಫೋಟೊಗ್ರಫಿ ಸಮಯದಲ್ಲಿ ಉತ್ಪ್ರೇಕ್ಷೆಯ ಮಾತುಗಳ ಆಟ ಹೂಡುತ್ತಾರೆ. ಅನೇಕ ವರ್ಷಗಳಿಂದ ಬಾರದ ಇವು ಈ ಸಲ ಬಂದಿವೆ ಎಂದು ನಮ್ಮ ಉಮೇದು ಹೆಚ್ಚಿಸಿದ.